ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

14ನೇ ಜೂನ್, 2013

**ಮಾನ್ಯಶ್ರೀ ಸಿದ್ದರಾಮಯ್ಯ ರವರೇ,**

ಕರ್ನಾಟಕ ಮಾಹಿತಿ ಸಂವಹನ ತಂತ್ರಜ್ಞಾನ ತಂಡ 2020 (ವರದಿ) ಮತ್ತು ಅದರಲ್ಲಿ ಮಾಡಲಾಗಿರುವ ಶಿಫಾರಸುಗಳಿಂದ ನಮ್ಮ ಬೆಂಗಳೂರಿನ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಕುರಿತಂತೆ ಅನೇಕ ನಾಗರೀಕರು ಹಾಗು ನಿವಾಸಿ ಅಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಬಹಳ ಕಾಳಜಿಯಿಂದ ನನ್ನ ಬಳಿ ಚರ್ಚಿಸುತ್ತಿದ್ದಾರೆ ಮತ್ತು ತಮ್ಮ ಆತಂಕಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

ನಗರ ಮತ್ತು ನಾಗರೀಕರು ಎದುರಿಸುತ್ತಿರುವ ನಿಜವಾದ ಸವಾಲುಗಳ ಬಗ್ಗೆ, ಅದರಲ್ಲೂ ವಿಶೇಷವಾಗಿ ಪಾರದರ್ಶಕತೆ ಮತ್ತು ನಿಜವಾದ ಆಡಳಿತ ಸುಧಾರಣೆಗಳ ಕುರಿತಾಗಿ ವರದಿಯ ಶಿಫಾರಸುಗಳು, ಮೌನವಾಗಿದೆಯೆಂಬುದನ್ನು ಅವರು ನನ್ನ ಗಮನಕ್ಕೆ ತಂದಿದ್ದಾರೆ. ತಾವು ಕೂಡ ಅಂಗೀಕರಿಸುವಂತೆ ಬೆಂಗಳೂರಿನ ಅಭಿವೃದ್ಧಿಗಾಗಿ ಮಾಡಲಾಗುವ ಯಾವುದೆ ಪ್ರಸ್ತಾವನೆಗಳು ಅತ್ಯಂತ ಮೂಲಭೂತ ಸಂಗತಿಗಳಾದ ಶಾಸನಬದ್ಧ ಯೋಜನೆಗಳು ಮತ್ತು ನಾಗರಿಕ-ಕೇಂದ್ರಿತ ಆಡಳಿತಾತ್ಮಕ ಸುಧಾರಣೆಗಳ ಕ್ರಮಗಳನ್ನು ಒಳಗೊಂಡಿಲ್ಲದಿದ್ದಲ್ಲಿ ಉತ್ತಮ ಆಡಳಿತದ ಭರವಸೆಯ ಮೇಲೆ ಚುನಾಯಿತಗೊಂಡಿರುವ ಸರ್ಕಾರದ ನೀತಿಗಳ ಜೊತೆ ಹೊಂದಿಕೆಯಾಗುವುದಿಲ್ಲ.

ವರದಿಯ ಮುಖ್ಯ ಅಂಶಗಳಲ್ಲೊಂದಾಗಿರುವ ಫ್ಲೋರ್ ಸ್ಪೇಸ್ ಸೂಚ್ಯಂಕದ ಏರಿಕೆಗೆ ತಕ್ಕಂತೆ, ಅದಕ್ಕೆ ಅಗತ್ಯವಿರುವ ರಸ್ತೆಗಳು, ನೀರು, ವಿದ್ಯುಚ್ಛಕ್ತಿ, ನಾಗರಿಕ ಸವಲತ್ತುಗಳುಮುಂತಾದ ಮೂಲಭೂತ ಸೌಕರ್ಯಗಳ ಇತಿಮಿತಿಗಳನ್ನು ಪರಿಗಣಿಸದೆ, ನಿರ್ಮಾಣದಾರರ ಫ್ಲೋರ್ ಸ್ಪೇಸ್ ಸೂಚ್ಯಂಕವನ್ನು ಅಧಿಕಗೊಳಿಸಿ, ಅದರಿಂದ ಬೆಂಗಳೂರಿನ ಅಭಿವೃದ್ಧಿಗೆ ಆದಾಯವನ್ನು ಹೆಚ್ಚಿಸಲು ಶಿಫಾರಸು ಮಾಡಿರುವುದು ನಗರಕ್ಕೆ ಸಾವಿನ ಗಂಟೆಯನ್ನು ಬಾರಿಸುತ್ತಿದೆ. ಅದೂ ಅಲ್ಲದೆ, ಇಂದು ನಗರ ಮತ್ತು ನಾಗರೀಕರು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಯಾರು ಬಾಹ್ಯಂಶ ಹೊಣೆಗಾರರಾಗಿದ್ದರೂ ಅಂತಹ ಬಿಲ್ಡರ್ ಗಳ, ಗುತ್ತಿಗೆದಾರರ ಮತ್ತು ರಿಯಲ್ ಎಸ್ಟೇಟ್ ಕಂಪನಿಗಳ ವಾಣಿಜ್ಯ ಹಿತಾಸಕ್ತಿಗಳಿಗೆ ನಗರದ ಅಭಿವೃದ್ಧಿ ಯೋಜನೆಗಳು ಶರಣಾಗಬೇಕೆನ್ನುವುದನ್ನು ಇದು ಸೂಚಿಸುತ್ತಿದೆ.

ಬಹಳ ಕಾಲದಿಂದ, ಅನೇಕ ಗುತ್ತಿಗೆಗಳು ಮತ್ತು ಯೋಜನೆಗಳೂ ಸೇರಿದಂತೆ ನಗರದ ಅಭಿವೃದ್ಧಿ ಕೆಲಸಗಳಲ್ಲಿ ಕೆಲವು ನಿರ್ಮಾಣದಾರರ ಮತ್ತು ಗುತ್ತಿಗೆದಾರರ ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವವು ದಟ್ಟವಾಗಿದ್ದು, ನಗರದ ಯೋಜನೆಗಳನ್ನು ಕೆಲವರು ತಮ್ಮ ಹಿಡಿತದಲ್ಲೆ ಇಟ್ಟುಕೊಂಡಿರುವಂತೆ ಕಾಣುತ್ತಿದೆ. ನಮ್ಮ ನಗರಾಡಳಿತದ ಕೆಟ್ಟ ನಿರ್ವಹಣೆಯ ಸಂಕೇತದಂತಾಗಿರುವ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲೆ ಆಳವಾಗಿ ಬೇರೂರಿರುವ ಮತ್ತು ಹಿತಾಸಕ್ತಿ ಸಂಘರ್ಷಗಳ ವೈರುಧ್ಯಗಳನ್ನು ಹೊಂದಿರುವ ಅನೇಕರು ಚುನಾವಣೆಯಲ್ಲಿ ಆಯ್ಕೆಗೊಂಡು ಜನಪ್ರತಿನಿಧಿ-ಶಾಸಕರಾಗಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಸಾರ್ವಜನಿಕ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಇಂತಹ ಗುತ್ತಿಗೆದಾರರ ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಗಳನ್ನು ಕೊನೆಗಾಣಿಸುವ ತುರ್ತು ಅಗತ್ಯವಿದೆ.

...2..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್: 91-80-22863680
ಅಂತರ್ಜಾಲ ವಿಳಾಸ : rajeev.c@nic.in

ಇಂತಹ ಸನ್ನಿವೇಶಗಳಲ್ಲಿ, ಮೇಲೆ ಉಲ್ಲೇಖಗೊಂಡಂತಹ ಯಾವುದೇ ಪ್ರಸ್ತಾವನೆ, ಅದು ಎಷ್ಟೇ ಯಶಸ್ವೀ ಕೈಗಾರಿಕೋದ್ಯಮಿಗಳ ಬೆಂಬಲವನ್ನು ಹೊಂದಿದ್ದರೂ ಸಹ, ನಗರದ ಅಭಿವೃದ್ಧಿಯ ಮೇಲೆ ಪ್ರಭಾವಬೀರಲಿಚ್ಛಿಸುವ ಬಿಲ್ಡರ್ ಗಳ ಮತ್ತು ರಿಯಲ್ ಎಸ್ಟೇಟ್ ಲಾಬಿಯ ಒಂದು ಪ್ರಯತ್ನವೆಂದೇ ಪರಿಗಣಿಸಬೇಕಾಗುತ್ತದೆ. ನಗರಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಬಿಲ್ಡರ್ ಗಳಿಗೆ ನೀಡುವ ಪದ್ದತಿ ಪ್ರಪಂಚದಲ್ಲೆಲ್ಲಿಯೂ ಇಲ್ಲ ಮತ್ತು ಖಂಡಿತವಾಗಿ ಇದು ನಮ್ಮ ಬೆಂಗಳೂರಿನಲ್ಲಿ ಆಗಬಾರದು. ಇಂತಹ ಕ್ರಮಗಳಿಂದ ನಗರದ ಅಭಿವೃದ್ಧಿಯೂ ಸಾಧ್ಯವಾಗುವುದಿಲ್ಲ ಮತ್ತು ಸಮಸ್ಯೆಗಳೂ ನಿವಾರಣೆಯಾಗುವುದಿಲ್ಲ.

ಇಂತಹ ಕ್ರಮಗಳು ಅಪಾಯಕಾರಿ ಮಾತ್ರವಲ್ಲದೆ, ಗಟ್ಟಿಯಾದ ಮತ್ತು ಸಮಗ್ರವಾದ ನೀತಿನಿಯಮಗಳ ಅನುಷ್ಠಾನದಿಂದ ಆರ್ಥಿಕ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ನಿರ್ವಹಿಸುವ ತನ್ನ ಜವಾಬ್ದಾರಿಯಿಂದ ಸರ್ಕಾರ ಹಿಂದಡಿಯಿಡುತ್ತಿರುವುದನ್ನು ಸೂಚಿಸುತ್ತವೆ. ಇಂತಹ ಪೊಳ್ಳು ಪ್ರಸ್ತಾವನೆಗಳು ಪ್ರತಿಪಾದಿಸುವ ಅಡ್ಡದಾರಿಗಳಾಗಲಿ ಅಥವಾ ಸುಲಭ ಪರಿಹಾರೋಪಾಯಗಳಾಗಲಿ ಅದಕ್ಕೆ ತಕ್ಕ ಹಾಗೆ ಬೆಲೆ ಮತ್ತು ಪರಿಣಾಮಗಳನ್ನೂ ಬೇಡುತ್ತದೆ.

ಬದಲಿಗೆ ಸರ್ಕಾರವೆ ಬೆಂಗಳೂರಿನ ನಾಗರಿಕ ಸೇವೆ ಮತ್ತು ಸೌಕರ್ಯಗಳ ಮೇಲಿನ ಅಪಾರ ಒತ್ತಡವನ್ನು ಕಡಿಮೆಮಾಡಲು, ಯಲಹಂಕ, ಕೆಂಗೇರಿ, ದೇವನಹಳ್ಳಿ, ಹೊಸಕೋಟೆ ಮುಂತಾದ ಬೆಂಗಳೂರಿನ ಉಪನಗರಗಳನ್ನು ಅಭಿವೃದ್ಧಿಗೊಳಿಸುವುದೂ ಸೇರಿದಂತೆ ನಗರದ ಅಭಿವೃದ್ಧಿ ಯೋಜನೆಗಳ ಸಮಗ್ರವಾದ ನೀಲಿನಕ್ಷೆಯನ್ನು ತಯಾರಿಸಬೇಕು.

ಬೆಂಗಳೂರಿನ ಅಸಂಖ್ಯಾತ ಸಮಸ್ಯೆಗಳಿಗೆ ಪರಿಹಾರಗಳ ಯಾವುದೇ ಪ್ರಸ್ತಾವನೆಯು ಬೆಂಗಳೂರಿನ ಸಮಸ್ತ ನಾಗರೀಕರ ಆಕಾಂಕ್ಷೆಗಳನ್ನು ಮತ್ತು ಎಲ್ಲಾ ಸಾಮಾಜಿಕ-ವಾಣಿಜ್ಯ ವರ್ಗಗಳ ಹಿತವನ್ನು ಸಂರಕ್ಷಿಸುವುದರ ಜೊತೆಗೆ ವಿಶ್ವದ, ಅದರಲ್ಲೂ ವಿಶೇಷವಾಗಿ ಏಷ್ಯಾ ಖಂಡದ ಯಶಸ್ವಿ ನಗರಗಳ ಯೋಜನೆಗಳನ್ನು ಮತ್ತು ಆರ್ಥಿಕ ತಂತ್ರಗಳನ್ನು ಅನುಸರಿಸಿ ನಿರೂಪಿತವಾಗಬೇಕು. ಹಾಗೆಯೇ ಸರ್ಕಾರದ ದೃಷ್ಟಿಯಲ್ಲಿ ಮೊಟ್ಟಮೊದಲ ಆದ್ಯತೆಯ ವಿಷಯಗಳಾಗಿ ಸಮರ್ಪಕ ಕುಡಿಯುವ ನೀರು, ಸಮೂಹ ಸಾರಿಗೆ, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಸಮಾಜದ ಎಲ್ಲ ವರ್ಗದವರಿಗೂ ಕೈಗೆಟಕುವ ವಸತಿ ಸೌಲಭ್ಯಗಳನ್ನು ಒದಗಿಸುವೆಡೆಗೆ ಕೇಂದ್ರಿತವಾಗಿರಬೇಕು.

ತಾವು ನಾಗರೀಕರ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸಿ, ಪಟ್ಟಭದ್ರ ಹಿತಾಸಕ್ತಿಗಳ ಮತ್ತು ವಸೂಲಿಗಾರರ ಪ್ರಯತ್ನಗಳಿಂದ ನಗರವನ್ನು ಸಂರಕ್ಷಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ಬೆಂಗಳೂರು

14/06/13